**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆಗಳ ಇಲಾಖೆ**

ಸಂಖ್ಯೆ:ವಾತೆಜಂಆ(ಆ)/ವಿ.ಸ.&ಸೇ.ತೆ-4/ಟಿ.ನಂ. /2021-22

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,(ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿ-4,
"ಎ" ಬ್ಲಾಕ್,4ನೇ ಮಹಡಿ, ವಾಣಿಜ್ಯ ತೆರಿಗೆಗಳ ಕಾರ್ಯಾಲಯ-2,
ರಾಜೇಂದ್ರ ನಗರ, 80 ಅಡಿ ರಸ್ತೆ, ಕೋರಮಂಗಲ,
ಬೆಂಗಳೂರು-560 047, ದೂ:080-25704833
**ದಿನಾಂಕ: 28.01.2022**

# <u>ಮರು ಪ್ರಕಟಣೆ</u>

**ಉಲ್ಲೇಖ: ಈ ಕಚೇರಿಯ ಪ್ರಕರಣೆ ಸಂಖ್ಯೆ:ವಾತೆಜಂಆ(ಆ)/ವಿ.ಸ.&ಸೇ.ತೆ-4/ ಟಿ.ನಂ1090/2021-22, ದಿನಾಂಕ: 19.01.2022.**

*****

ಈ ಪ್ರಕಟಣೆ ಪತ್ರದ ಮೇಲೆ ಬಲಭಾಗದಲ್ಲಿ ನಮೂದಿಸಿರುವ ವಿಳಾಸದ ಕಟ್ಟಡದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಈ ವಿಭಾಗದ ಕಚೇರಿ ಮತ್ತು ಈ ವಿಭಾಗದ ಅಧೀನ ಕಚೇರಿಗಳು ಹಾಲಿ ಕಾರ್ಯನಿರ್ವಹಿಸುತ್ತಿರುವ ಮತ್ತೊಂದು ಕಟ್ಟಡವಾದ ಟಿ.ಟಿ.ಎಂ.ಸಿ. ಕಟ್ಟಡ, 5ನೇ ಮಹಡಿ, ಬಿ.ಎಂ.ಟಿ.ಸಿ. 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು-560 047 ಇವೆರಡೂ ಕಟ್ಟಡಗಳ ಆವರಣಗಳನ್ನು ಸ್ವಚ್ಛವಾಗಿ, ಪಾರದರ್ಶಕವಾಗಿ ಇಟ್ಟುಕೊಳ್ಳುವ ಸಲುವಾಗಿ ಮತ್ತು ಸದರಿ ಎರಡೂ ಕಟ್ಟಡಗಳಲ್ಲಿ ಇಲಾಖೆಯ ಕಚೇರಿಗಳು ಕಾರ್ಯನಿರ್ವಹಿಸುತ್ತಿರುವ ಆವರಣದಲ್ಲಿ ಅನಧಿಕೃತ ಚಟುವಟಿಕೆಗಳಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ಮೇಲ್ಕಂಡ ಎರಡೂ ಕಟ್ಟಡಗಳ ಹೊರ ಮತ್ತು ಒಳ ಆವರಣಗಳಲ್ಲಿ ಹೊಸದಾಗಿ 13 ಸಂಖ್ಯೆ (ಹದಿಮೂರು) ಸಿಸಿ ಟಿವಿ ಕ್ಯಾಮೆರಾಗಳನ್ನು ಖರೀದಿಸಿ ಅಳವಡಿಸಲು ನಿರ್ದರಿಸಲಾಗಿದೆ.

<u>ಈ ನಿಟ್ಟಿನಲ್ಲಿ ಮೇಲ್ಕಂಡ, ಇಲಾಖೆಯ ಎರಡೂ ಕಟ್ಟಡಗಳ ಹೊರ ಮತ್ತು ಒಳ ಆವರಣಗಳಲ್ಲಿ ಹೊಸದಾಗಿ 13 ಸಂಖ್ಯೆ (ಹದಿಮೂರು) ಸಿಸಿ ಟಿವಿ ಕ್ಯಾಮೆರಾಗಳನ್ನು ಖರೀದಿಸಿ ಅಳವಡಿಸಬೇಕಾಗಿರುವುದರಿಂದ</u>, ಈ ಸಂಬಂಧ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಅಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ವರ್ತಕರಿಂದ ಮೇಲ್ಕಂಡ ಉಲ್ಲೇಖಿತ ಪ್ರಕಟಣೆಯಲ್ಲಿ ದರಪಟ್ಟಿಯನ್ನು ಕರೆಯಲಾಗಿದೆ.

ಆದರೆ, ಮೇಲ್ಕಂಡ ಉಲ್ಲೇಖಿತ ಪ್ರಕಟಣೆಗೆ ಅನುಗುಣವಾಗಿ, ನಿಗಧಿತ ಅವಧಿಯಲ್ಲಿ ಯಾವುದೇ ನೊಂದಾಯಿತ ವ್ಯಾಪಾರಸ್ಥರು ದರಪಟ್ಟಿಗಳನ್ನು ಈ ಕಚೇರಿಗೆ ಸಲ್ಲಿಸದೇ ಇರುವುದರಿಂದ, ಮತ್ತೊಮ್ಮೆ ಅರ್ಹ ನೊಂದಾಯಿತ ವ್ಯಾಪಾರಸ್ಥರಿಂದ ದರಪಟ್ಟಿಯನ್ನು ಕರೆಯಲಾಗಿದೆ ದರಪಟ್ಟಿಗಳನ್ನು ಸಲ್ಲಿಸಲು ನಿಗಧಿತ ಅವಧಿಯನ್ನು ಸಹ ಈ ಮೂಲಕ ವಿಸ್ತರಣೆ ಮಾಡಲಾಗಿದೆ.

ಆದ್ದರಿಂದ, ಆಸಕ್ತಿಯುಳ್ಳ ನೋಂದಾಯಿತ ವರ್ತಕರು (ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಅಡಿಯಲ್ಲಿ ನೋಂದಾಯಿತರಾಗಿರುವ ವರ್ತಕರು) ಮೇಲಿನ ಕಂಡಿಕೆಯಲ್ಲಿ ನಮೂದಿಸಿರುವ ಸರಕಿಗೆ ತಗಲುವ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ ಕಚೇರಿಯು ಕಾರ್ಯನಿರ್ವಹಿಸುವ ದಿನಗಳ ಅವದಿಯಲ್ಲಿ (ಸಾರ್ವತ್ರಿಕ ರಜೆ ದಿನಗಳನ್ನು ಹೊರತುಪಡಿಸಿ) **<u>ಈ ಕಚೇರಿಗೆ 5 ದಿನಗಳ ಒಳಗಾಗಿ</u>** ದರಪಟ್ಟಿಯನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಹಾಯಪೀಠದ ದೂರವಾಣಿ ಸಂಖ್ಯೆ:080-257704833 ಗೆ ಸಂಪರ್ಕಿಸಬಹುದು ಅಥವಾ ಕಚೇರಿಯು ಕಾರ್ಯನಿರ್ವಹಿಸುವ ದಿನಗಳಲ್ಲಿ/ಅವಧಿಯಲ್ಲಿ ಖುದ್ದಾಗಿ ಕಚೇರಿಗೆ ಭೇಟಿ ನೀಡಿ ಸಂಬಂಧಪಟ್ಟವರಿಂದ ವಿವರಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ)
ವಿ.ಸ. ಮತ್ತು ಸೇ.ತೆ.ಕಚೇರಿ-4, ಬೆಂಗಳೂರು.

**<u>ಪ್ರತಿಗಳು:-</u>**

1] ಸೂಚನಾ ಫಲಕಕ್ಕೆ 2] ಕಛೇರಿ ಪ್ರತಿ. 3] ಇ-ಆಡಳಿತ ವಿಭಾಗ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.